**ಜಾರಿ ನಂ. 01 /2019** **ಪಿ.ಡಬ್ಲ್ಯೂ-1 (ರತ್ನಯ್ಯ )**

**ಸಾಕ್ಷಿಯನ್ನು ದಿನಾಂಕಃ 17.01.2026 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ತೀರ್ಪುಋಣಿ ರವರ ಪರ ವಕೀಲರಾದ ಶ್ರೀ ಆರ್ ಸಿ ವಕೀಲರಿಂದಃ**

1. ಸ. ನಂ 13 ವಿಸ್ತೀರ್ಣ 4 ಎಕರೆ 3 ಗುಂಟೆ ಪೈಕಿ 2 ಎಕರೆ 1 ವರೆ ಗುಂಟೆ ಪೂರ್ವಕ್ಕೆ ಕಿರಣ್ ಕುಮಾರ್ ರವರ ಸ್ವತ್ತು, ಪಶ್ಚಿಮಕ್ಕೆ ಸರ್ಕಾರಿ ಶಾಲೆಯ ಜಮೀನು, ಉತ್ತರಕ್ಕೆ ಸರ್ಕಾರಿ ಓಣಿ, ದಕ್ಷಿಣಕ್ಕೆ ಬುಂಡಯ್ಯನ ಮಾಳ ಎಂದರೆ ಸಾಕ್ಷಿಯು ಪೂರ್ತಿ 4 ಎಕರೆ 3 ಗುಂಟೆ ಜಮಿನಿಗೆ ನಾನೇ ಮಾಲೀಕ ಎಂದು ನುಡಿಯುತ್ತಾರೆ. ಪ್ರಸ್ತುತ ಅರ್ಜಿಯ ಜಡ್ಜಮೆಂಟ್ ಡೆಟರ್ ಕಿರಣ್ ಕುಮಾರ್ ರವರು ದಿಃ 03.11.2008 ರಂದು ನನಗೆ ದಿಃ 10.01.2007 ರ ಕರಾರು ಪತ್ರದಂತೆ ನನ್ನ ಭಾಗದ ಸ್ವತ್ತನ್ನು ರೂ.1 ವರೆ ಲಕ್ಷ ರೂಗಳಿಗೆ ಖರೀದಿಸುವುದಾಗಿ ಮಾತು ಕತೆ ಮಾಡಿಕೊಂಡು ಮುಂಗಡ ಹಣ ರೂ 1 ಲಕ್ಷ ರೂಗಳನ್ನು ನನಗೆ ನೀಡಿದ್ದರು, ಉಳಿಕೆ ಹಣವನ್ನು ಪಡೆದು ಕ್ರಯಪತ್ರವನ್ನು ಬರೆದುಕೊಡುವಂತೆ ಕೋರಿ ನೋಟೀಸನ್ನು ನೀಡಿದ್ದರು ಎಂದರೆ ಸಾಕ್ಷಿಯು ಅದು ಸುಳ್ಳು ಎಂದು ನುಡಿಯುತ್ತಾರೆ ಮುಂದುವರಿದು ದುಡ್ಡೆ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಅವರೇ ಹಾಜರುಪಡಿಸಿದ ನಿಪಿ 11 ರಂತೆ ನೋಟೀಸನ್ನು ಕಿರಣ್ ಕುಮಾರ್ ರವರು ನೀಡಿರುತ್ತಾರೆ ಎಂದರೆ ಸಾಕ್ಷಿಯು ಅವರೇ ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಕಿರಣ್ ಕುಮಾರ್ ರವರು ನೀಡಿದ ನೋಟೀಸಿಗೆ ನಾನು ಉತ್ತರವನ್ನು ನೀಡಿರುತ್ತೇನೆ. ನಿಪಿ 17 ರಂತೆ ಉತ್ತರವನ್ನು ನೀಡಿರುತ್ತೇನೆ ಎಂದರೆ ಸರಿ. ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ಕಿರಣ್ ಕುಮಾರ್ ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದು ಹೇಳಿ ಪೋಲೀಸರ ಮುಂದೆ ದೂರನ್ನು ನೀಡಿರುತ್ತೇನೆ. ಸಾಕ್ಷಿಗೆ ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನಿಮಗೆ ತೊಂದರೆ ಇರುತ್ತದೆಯೇ ಎಂದರೆ ಸಾಕ್ಷಿಯು ಪೋಲೀಸರು ಆ ದಾಖಲಾತಿಯನ್ನು ಕೊಟ್ಟಿರುವುದಿಲ್ಲ ನ್ಯಾಯಾಲಯದಲ್ಲಿ ದಾವೆ ಇರುವುದರಿಂದ ಕೊಡಲು ಬರುವುದಿಲ್ಲ

ಎಂದು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಪುನಃ ನೀವು ಕೊಟ್ಟ ದೂರಿನಂತೆ ಪೋಲೀಸರು ಎಪ್ ಐ ಆರ್ ತಯಾರಿಸಿ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತಾರೆಯೇ ಎಂದರೆ ಸಾಕ್ಷಿಯು ಪೋಲೀಸರು ದೂರನ್ನೆ ಸ್ವೀಕರಿಸಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ದೂರನ್ನು ಬೀಚನಹಳ್ಳಿ ಪೋಲೀಸ್ ಠಾಣೆಗೆ ತೆಗೆದುಕೊಂಡು ಹೋಗಿದ್ದೆನು. ದೂರನ್ನು ನಮ್ಮ ಊರಿನವರ ಕೈಯಲ್ಲಿ ಬರೆಸಿಕೊಂಡು ಹೋಗಿದ್ದೆನು. ಬೀಚನಹಳ್ಳಿ ಪೋಲೀಸ್ ಠಾಣೆಯವರು ನಾನು ಕೊಟ್ಟ ದೂರನ್ನು ತೆಗೆದುಕೊಂಡಿರುವುದಿಲ್ಲ ಎಂದು ಹೇಳಿ ಎಸ್ ಪಿ ಯವರ ಮುಂದೆ ಯಾವುದೇ ದೂರನ್ನು ನೀಡಿರುವುದಿಲ್ಲ. ಸಾಕ್ಷಿಗೆ ನಿವೇನಾದರೂ ನ್ಯಾಯಾಲಯಕ್ಕೆ ಹೋಗಿ ಕಿರಣ್ ಕುಮಾರ್ ರವರ ಮೇಲೆ ಪಿ ಸಿ ಆರ್ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

2. ಸದರಿ ಕಿರಣ್ ಕುಮಾರ್ ರವರು ನನ್ನ ಮೇಲೆ ದಾವಾ ಹೂಡಿರುವ ಅಸಲು ದಾವಾ ನಂ. 298/2011 ರಲ್ಲಿ ನಾನು ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು ಅದರಲ್ಲಿ ಕಿರಣ್ ಕುಮಾರ್ ರವರ ವಿರುದ್ಧ ಪೋಲೀಸ್ ಠಾಣೆಗೆ ದೂರು ನೀಡಲು ಹೋಗಿದ್ದು ಪೋಲೀಸರು ಆ ದೂರನ್ನು ತೆಗೆದುಕೊಂಡಿರುವುದಿಲ್ಲ ಎಂದು ಹೇಳಿ ಬರೆಸಿರುವುದಿಲ್ಲ. ಸಾಕ್ಷಿಗೆ ಕಿರಣ್ ಕುಮಾರ್ ರವರು ದಿಃ 03.11.2008 ರಂದು ನಿಮಗೆ ನೋಟೀಸನ್ನು ನೀಡಿದ್ದು ಆ ನೋಟೀಸನ್ನು ನೀಡುವ ಪೂರ್ವದಲ್ಲಿ ನೀವೇನಾದರೂ ನೀವು ಹೇಳುವಂತೆ ಕ್ರಯಪತ್ರ ಆಗುವ ಸಮಯದಲ್ಲಿ ಪಡೆದುಕೊಂಡ 25 ಸಾವಿರ ರೂಗಳನ್ನು ತೆಗೆದುಕೊಳ್ಳುವಂತೆ ಕಿರಣ್ ಕುಮಾರ್ ರವರಿಗೆ ವಕೀಲರ ಮುಖಾಂತರ ನೋಟೀಸನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ನೋಟೀಸನ್ನು ನೀಡಿದ್ದೆನು ಎಂದು ನುಡಿಯುತ್ತಾರೆ. ನಾನು ಹೇಳುವಂತೆ 25 ಸಾವಿರ ರೂಗಳನ್ನು ಕಿರಣ್ ರವರಿಂದ ಪಡೆದುಕೊಂಡಿರುವುದೂ ಇಲ್ಲ ಆದುದ್ದರಿಂದಲೇ ಅವರಿಗೆ ನೋಟೀಸನ್ನು ನೀಡಿರುವುದೂ ಇಲ್ಲ ಆದರೂ ಸಹಿತ ಕಿರಣ್ ಕುಮಾರ್ ರವರಿಗೆ ಅವರು ನೋಟೀಸನ್ನು ನೀಡುವ ಪೂರ್ವದಲ್ಲಿ ಅವರಿಗೆ ನೋಟೀಸ್ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ದಿಃ 03.11.2008 ರಂದು ಕಿರಣ್ ಕುಮಾರ್ ರವರು ನಿಮಗೆ ನೋಟೀಸನ್ನು ನೀಡಿದ ನಂತರವೇ ರೂ 25 ಸಾವಿರ ಹಣವನ್ನು  ಕಿರಣ್ ಕುಮಾರ್ ರವರಿಂದ ಪಡೆದುಕೊಂಡಿದ್ದೆನು ಎಂಬ ವಿಷಯವನ್ನು ಹೇಳಲಾಗಿರುತ್ತದೆ ಎಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ  ತೀರ್ಪು ಋಣಿಯವರ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ